ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯ ಮಟ್ಟದ ಸರ್ಕಾರಿ ಕಛೇರಿಗಳನ್ನು ಸುವರ್ಣ ಸೌಧಕ್ಕೆ ಸ್ಥಳಾಂತರಿಸುವ ಕುರಿತು

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ) –

432 (586) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸರ್ಕಾರವು ಕೆಲವು ಪ್ರಮುಖವಾದಂತಹ ರಾಜ್ಯ ಮಟ್ಟದ ಕಛೇರಿಗಳನ್ನು ಸುವರ್ಣ ಸೌಧ ಬೆಳಗಾವಿಗೆ ಸ್ಥಳಾಂತರ ಮಾಡಲು ಆದೇಶ ಹೊರಡಿಸಿದ್ದು ನಿಜವೇ; (ವಿವರ ನೀಡುವುದು)

(ಆ) ಇಲ್ಲಿಯವರೆಗೆ ಎಷ್ಟು ರಾಜ್ಯ ಮಟ್ಟದ ಕಛೇರಿಗಳು ಬೆಳಗಾವಿಯ ಸುವರ್ಣ ಸೌಧಕ್ಕೆ ಸ್ಥಳಾಂತರಗೊಂಡಿವೆ; (ಅವುಗಳ ಹೆಸರು ಮತ್ತು ಸ್ಥಳಾಂತರಗೊಂಡ ದಿನಾಂಕದೊಂದಿಗೆ ವಿವರ ನೀಡುವುದು)

(ಇ) ದಿನಾಂಕ: 30-06-2020 ರಂದು ಸರ್ಕಾರದ ಆದೇಶ ಸಂಖ್ಯೆ:ಯೋಇ 75 ಯೋಪರ 2018 (ಭಾಗ-6) ಪ್ರಕಾರ ಬೆಳಗಾವಿಯಲ್ಲಿ ಬೇರೆ ಬೇರೆ ಕಡೆ ಇರುವ ಕಛೇರಿಗಳನ್ನು ಸುವರ್ಣ ಸೌಧಕ್ಕೆ ಸ್ಥಳಾಂತರ ಮಾಡಲಾಗಿದೆ ಎಂದು ತಿಳಿಸಿರುವುದು ನಿಜವೇ; ನಿಜವಿದ್ದಲ್ಲಿ, ಕಾರಣಗಳೇನು;

(ಈ) ರಾಜ್ಯ ಮಟ್ಟದ ಕಛೇರಿಗಳನ್ನು ಸ್ಥಳಾಂತರ ಮಾಡಲು ಹಾಗೂ ಅಧಿಕಾರ ವಿಕೇಂದ್ರೀಕರಣ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೇ; ನಿಜವಿದ್ದಲ್ಲಿ, ರಾಜ್ಯ ಮಟ್ಟದ ಕಛೇರಿಗಳನ್ನು ಸ್ಥಳಾಂತರ ಮಾಡದಿರಲು ಕಾರಣವೇನು;

(ಉ) ಈಗಲಾದರೂ ಸರ್ಕಾರ ತಕ್ಷಣ ರಾಜ್ಯ ಮಟ್ಟದ ಕಛೇರಿಗಳನ್ನು ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳುವುದೇ?